ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಮನೆಗೂ, ಮಠಕ್ಕೂ ಇರುವ ವ್ಯತ್ಯಾಸವೇನು?*



ಇಲ್ಲಿ ದಾಂಪತ್ಯ ಮುಖ್ಯ, ಅಲ್ಲಿ ಪಥ್ಯ ಮುಖ್ಯ.

ಎಚ್.ಜಿ. ಜಗದೀಶ್, ಮೈಸೂರು
*ಇತ್ತೀಚೆಗೆ ಹೆಚ್ಚಾಗುತ್ತಿರುವ ಅತ್ಯಾಚಾರ ಪ್ರಕರಣಗಳಿಗೆ ಸ್ತ್ರೀಯರ ಅತಿಯಾದ ಫ್ಯಾಶನ್ ಕಾರಣ ಎಂದು ನನ್ನ ಅನಿಸಿಕೆ. ನೀವೇನಂತೀರಿ?*
ಇಂದ್ರ ಕುಲಗೆಡಿಸಿದಾಗ ಅಹಲ್ಯೆ ಬಿಕಿನಿ ಧರಿಸಿದ್ದಳೇನು? ಕಚ್ಚೆ ಸಡಿಲವಾಗುವುದಕ್ಕೆ ಕಾನೂನು ಸಡಿಲವಾಗಿರುವುದೇ ಕಾರಣ.

ಎಲೆಮುದ್ದನಹಳ್ಳಿ ಸೋಮಶೇಖರ್, ಮೈಸೂರು
*ಕಾಣದ ಕಡಲಿಗೆ ಪಯಣಿಸಿದ ಜಿ.ಎಸ್. ಶಿವರುದ್ರಪ್ಪನವರಿಗೆ ನಿಮ್ಮ ಕಡೆಯ ಮಾತು ಏನು?*
ಗುರುಗಳೆ, ನೀವು ಟಿವಿ ನಿರೂಪಕಿಯರು, ಕನ್ನಡ ರಕ್ಷಣಾ ಪಡೆಗಳು ಮಾಡುವ ಕನ್ನಡದ ಕೊಲೆಯನ್ನು ಕಂಡು ತಡೆಯಲಾರದೆ ಇಷ್ಟು ಬೇಗ ನಿರ್ಗಮಿಸಬಾರದಿತ್ತು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ; ಪ್ರೇಮಿಗಳಿಗೆ?*



ಕಾಂಪೌಂಡು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಗಣ್ಯರು, ಖ್ಯಾತನಾಮರು, ಕವಿ, ಕಲಾವಿದ, ಸಾಹಿತಿಗಳು ಡಿಸೆಂಬರ್‌ನಲ್ಲೇ ಏಕೆ ನಿಧನರಾಗುತ್ತಾರೆ?*
ಹೇಮ ಉರುಫ್ ಚಿನ್ನದಂತಹವರು ಅಂತವಾಗುವ ಹೇಮಂತ ಋತುವಾದ್ದರಿಂದ!

ರಾಜೇಂದ್ರ ಇಂಗಳಗಿ, ರಾಮದುರ್ಗ
*ನಿಮಗೆ ಉತ್ತರ ಕರ್ನಾಟಕ ಎಂದರೆ ಅಲರ್ಜಿಯೆ?*
ಕ್ಷಮಿಸಿ; ಸಾಹಿತಿಗಳು, ಕಲಾವಿದರಿಗೆ ದಿಕ್ಕು, ದೆಸೆಗಳಿರುವುದಿಲ್ಲ. ಸಮಗ್ರ, ವಿಶಾಲ ಕರ್ನಾಟಕ ಮಾತ್ರ ನಮಗೆ ಪ್ರಸ್ತುತ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಹಳೇ ವರ್ಷಕ್ಕೆ ವಿದಾಯ, ಹೊಸ ವರ್ಷಕ್ಕೆ ಸ್ವಾಗತವನ್ನು ಯಾವ ರೀತಿ ಮಾಡಿದರೆ ಒಳ್ಳೆಯದು?*
ಉಷೆಯನ್ನು ನಶೆಯಿಲ್ಲದೆ ಸ್ವಾಗತಿಸುವ ಮೂಲಕ!

ರಮೇಶ್, ಹನುಮನಾಳು
*‘ಅಮ್ಮ’, ’ತಾಯಿಯ ಕೃಪೆ’, ‘ಮಾತೃದೇವೋಭವ’, ಎಂದೆಲ್ಲಾ ವಾಹನಗಳ ಹಿಂದೆ ಬರೆಸಿರುತ್ತಾರೆ. ತಂದೆ ಮಾಡಿದ ಪಾಪವೇನು?*
‘ಓದಿ ವಿದ್ಯಾವಂತನಾಗಿ ದುಡಿದು ತಿನ್ನೋ ಅಯೋಗ್ಯ’ ಎಂದು ಬೈದದ್ದು ಮಹಾ ಪಾಪವಲ್ಲವೇ!

ಅಮ್ಮುವನ ವಸುಂಧರಾ ಲಕ್ಷ್ಮಣ, ಕುಶಾಲನಗರ
*ಟಿವಿ ಧಾರವಾಹಿ ಬರೆಯುವವರಿಗೆ ಯಾವ ಬಹುಮಾನ ಕೊಡಬೇಕು?*
ಅಖಿಲ ಭಾರತ ಹನುಮನಬಾಲ ರಬ್ಬರ್ ಬ್ಯಾಂಡ್ ಎಲಾಸ್ಟಿಕ್ ಪ್ರಶಸ್ತಿ!

ವೈ.ಜಿ. ನರಸಿಂಹನ್, ವಿದ್ಯಾನಗರ
*ಮೋಕ್ಷಕ್ಕೂ, ಕಪಾಳಮೋಕ್ಷಕ್ಕೂ ಏನು ವ್ಯತ್ಯಾಸ?*
ಎರಡೂ ಕಣ್ಣು ಮುಚ್ಚಿ ಕುಳಿತರೆ ಮೋಕ್ಷ, ಒಂದೇ ಕಣ್ಣು ಮುಚ್ಚಿ ತೆಗೆದು ಮಾಡಿದರೆ ಕಪಾಳಮೋಕ್ಷ!

ರೇಷ್ಮಾ ಎ.ಎಸ್. ಬಾಳೆಹೊನ್ನೂರು
*ಹೆಂಡತಿ ಪಕ್ಕದಲ್ಲೇ ಇದ್ದರೂ, ಪ್ರೇಯಸಿ ಎದುರಲ್ಲೇ ಇದ್ದರೂ ಫೇಸ್‌ಬುಕ್‌ನಲ್ಲಿ ಐ ಲವ್ ಯೂ ಎಂದು ಹೇಳುವುದೇಕೆ?*
ಫೇಸ್ ನೋಡುತ್ತಾ ಹೇಳಲು ಧೈರ್ಯವಿಲ್ಲದವರಿಗೆ ಫೇಸ್‌ಬುಕ್ಕೇ ಗತಿ!

ಹೆಚ್.ಎಮ್. ಅನಂತಪದ್ಮನಾಭ, ಮೈಸೂರು
*ಕುದುರೆಗೆ ಕೊಂಬಿದೆಯೆ?*
ಒಂದಲ್ಲ, ಎರಡು; ಕ ಕೊಂಬು ಕು, ದ ಕೊಂಬು ದು!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
ಸಿನಿಮಾ ನಿರ್ದೇಶಕಿಯಾದ ನನ್ನ ಪ್ರೇಯಸಿ ಪ್ರತಿ ಚುಂಬನಕ್ಕೂ ಕಟ್ ಕಟ್ ಅಂತಾಳಲ್ಲ?
ನಿರ್ದೇಶಕಿ ಅವಳು, ನಾಯಕಿ ಮತ್ತೊಬ್ಬಳು; ಮತ್ಸರ ಇರಬೇಕಾದ್ದೇ!

ಅರಿಫ್, ದಾವಣಗೆರೆ
*ಕಣ್ಣಿಗೆ ಕಾಣದ ದೇವರಿಗೆ ಕೈ ಮುಗಿಯುವುದರಲ್ಲಿ ಅರ್ಥವಿದೆಯಾ?*
ಇದೆ ಎಂದರೆ ಇದೆ, ಇಲ್ಲ ಎಂದರೆ ಇಲ್ಲ. ಅದು ನಿಮ್ಮ ನಂಬಿಕೆ, ಸಂಸ್ಕಾರಗಳನ್ನು ಅವಲಂಬಿಸಿರುತ್ತದೆ.

ಡಿ.ಎಸ್. ಪಂಕಜಸುಬ್ರಮಣ್ಯಂ, ಬೆಂಗಳೂರು
*ಕುಮಾರಸ್ವಾಮಿ ಪ್ರಧಾನಮಂತ್ರಿ, ರೇವಣ್ಣ ಮುಖ್ಯಮಂತ್ರಿಯಾದರೆ ದೇವೇಗೌಡರು ಏನಾಗುತ್ತಾರೆ?*



ಹಣ್ಣುಹಣ್ಣು ಮುದುಕರು!

ಗಣೇಶ ಎಂ. ಪೈ, ಚಿಕ್ಕಮಗಳೂರು
*ಲೋಕಾಯುಕ್ತರ ದಾಳಿಗಳು ನಡೆಯುತ್ತಿದ್ದರೂ ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಇನಿತೂ ಕಡಿಮೆಯಾಗಿಲ್ಲ. ಏಕೆ?*
ಒಂದು ಕಡೆಯಿಂದ ಗುಡಿಸಿಕೊಂಡು ಬರುತ್ತಿದ್ದಂತೆಯೇ ಇನ್ನೊಂದು ಕಡೆಯಿಂದ ಬೀಳುತ್ತಾ ಸಾಗುವುದು ಕಸದ ಗುಣ ಮೈ ಬಾಯ್!

ವಿ. ಹೇಮಂತ ಕುಮಾರ್, ಬೆಂಗಳೂರು
*ಪಾರ್ಥೇನಿಯಂ ಗಿಡವನ್ನು ಕಾಂಗ್ರೆಸ್ ಗಿಡ ಎಂದು ಕರೆಯುತ್ತಾರೆ; ಏಕೆ?*
ಎಲ್ಲೆಲ್ಲೂ ಹರಡಿದ್ದರೂ ಏನೇನೂ ಪ್ರಯೋಜನ ಇಲ್ಲದಿರುವುದರಿಂದ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಬುದ್ಧಿಜೀವಿಗೂ, ಬುರುಡೆಜೀವಿಗೂ ಇರುವ ವ್ಯತ್ಯಾಸ?*
ಬುರುಡೆಜೀವಿಗೆ ಬುರುಡೆ ಇರುತ್ತದೆ.

■ ರಾಮ್